ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 1783-2013

ಚಾಸಾ ಃ 6 ಪ್ರಾಸಾ ಃ 5

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕಃ 27-10-2016

ವಾಗ್ಮೂಲದವರ ಹೆಸರು ಃ ಮಂಜುನಾಥ ಪೂಜಾರಿ
ತಂದೆ ಹೆಸರು ಃ ಮಂಜ ಪೂಜಾರಿ
ವಯಸ್ಸು ಃ 49 ವರ್ಷ
ಉದ್ಯೋಗ ಃ ಕಾರು ಚಾಲಕ
ವಾಸಸ್ಥ ಳ ಃ ಕೋಟೇಶ್ವರ

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ಚಾ.ಸಾ.1ರವರು ನಮ್ಮ ನೆರೆಮನೆಯವರಾದ ಕಾರಣ ಅವರ ಪರಿಚಯ ಇದೆ. ದಿ.27.11.2012ರಂದು ರಾತ್ರಿ 11.00ಗಂಟೆ ಸಮಯದಲ್ಲಿ ಕಟ್ಟೇದೇವರ ಉತ್ಸವವನ್ನು ನೋಡಲು ಹೋಗಿದ್ದು ಅಲ್ಲಿ ತುಂಬಾ ಜನ ಸೇರಿದ್ದು ನಾವು ಉತ್ಸವವನ್ನು ಮುಗಿದ ಮೇಲೆ ಮಧ್ಯರಾತ್ರಿ ಸುಮಾರು 12.00ಗಂಟೆ ಸಮಯಕ್ಕೆ ನಮ್ಮ ಮನೆಯ ಹತ್ತಿರ ಬೊಬ್ಬೆ ಹಾಕಿದ್ದ ಶಬ್ದ ಕೇಳಿಸಿದ್ದು ಅಲ್ಲಿ ಹೋಗಿ ನೋಡಿದಾಗ ಚಾ.ಸಾ.1ರವರು ನನ್ನ ಕರಿಮಣಿ ಮತ್ತು ಹವಳದ ಸರವನ್ನು ಯಾರೋ ಕಿತ್ತುಕೊಂಡು ಹೋದರು ಎಂದು ಅಳುತ್ತಿದ್ದರು. ಕಟ್ಟೇದೇವರ ಉತ್ಸವವನ್ನು ಮುಗಿಸಿಕೊಂಡು ಮನೆಗೆ ವಾಪಾಸು ಹೋಗುತ್ತಿದ್ದಾಗ ನಮ್ಮ ಮನೆಯ ಹಿಂದಿನ ರಸ್ತೆಯಲ್ಲಿ ಆ ಘಟನೆ ನಡೆದಿದೆ ಎಂದು ಹೇಳಿದರು. ಸುಲಿಗೆ ಮಾಡಿದ ವ್ಯಕ್ತಿಯನ್ನು ಚಾ.ಸಾ.1ರವರ ತಮ್ಮ ಚಾ.ಸಾ.2ರವರು ಹಿಂಬಾಲಿಸಿಕೊಂಡು ಹೋಗಿದ್ದು ಅವರು ಸಿಕ್ಕಿರುವುದಿಲ್ಲ ಎಂದು ಹೇಳಿರುತ್ತಾರೆ. ಸದ್ರಿ ಘಟನೆ ಆದ ಅರ್ಧಗಂಟೆಗೆ ಪೋಲೀಸರು ಸ್ಥಳಕ್ಕೆ ಬಂದು ಘಟನೆಯ ಬಗ್ಗೆ ನನ್ನನ್ನು ವಿಚಾರಿಸಿರುತ್ತಾರೆ.

ಪಾಟೀ ಸವಾಲುಃ 2ರಿಂದ 4ನೇ ಆರೋಪಿತರ ಪರವಾಗಿ ಶ್ರೀ ಆರ್ ಕೆ ಎಂ. ವಕೀಲರಿಂದಃ

2. ಪೋಲೀಸರು ನನ್ನನ್ನು ವಿಚಾರಿಸಿದಾಗ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳನ್ನು ಮಾತ್ರ ಹೇಳಿರುತ್ತೇನೆ. ಸುಲಿಗೆ ಆದ ವಸ್ತುಗಳ ಬಗ್ಗೆ ಮತ್ತು ಸುಲಿಗೆ

ಮಾಡಿದ ವ್ಯಕ್ತಿಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಆ ದಿನ ಉತ್ಸವ ಮುಗಿಯುವಾಗ ರಾತ್ರಿ 12.15ಗಂಟೆ ಆಗಿತ್ತು. ಆಗ ಅಲ್ಲಿ ಕತ್ತಲು ಇತ್ತು ಎಂದರೆ ಸರಿಯಲ್ಲ. ಘಟನೆ ನಡೆಯುವಾಗ ನಾನು ಕಟ್ಟೇಯ ಹತ್ತಿರ ಇದ್ದೆ. ಗಲಾಟೆ ಬಂದ ಜಾಗದಿಂದ ನಾನು ಇದ್ದ ಸ್ಥಳದವರೆಗೂ ತುಂಬಾ ಜನ ಇದ್ದರು. ನಾನು ಘಟನಾ ಸ್ಥಳಕ್ಕೆ ಹೋದ ನಂತರ ಅದರ ಬಗ್ಗೆ ಗೊತ್ತಾಗಿರುತ್ತದೆ.

3. ನಾನು ಸ್ಥಳಕ್ಕೆ ಹೋದಾಗ ಚಾ.ಸಾ.2 ಅಲ್ಲಿ ಇರಲಿಲ್ಲ. ಅವರು ಮುಕ್ಕಾಲು ಗಂಟೆಯ ನಂತರ ಅಲ್ಲಿಗೆ ಬಂದಿರುತ್ತಾರೆ. ಹಾಗೆ ಬಂದವರು ಸುಲಿಗೆ ಮಾಡಿದ ವ್ಯಕ್ತಿಗಳು ಸಿಗಲಿಲ್ಲ ಎಂದು ಹೇಳಿರುತ್ತಾರೆ. ಘಟನೆ ಆದ ಮರುದಿನ ಪೋಲೀಸರು ನನ್ನ ಸಂಪರ್ಕಕ್ಕೆ ಬಂದಿರುತ್ತಾರೆ. ಶಬ್ದ ಕೇಳಿ ತುಂಬಾ ಜನ ಅಲ್ಲಿಗೆ ಹೋಗಿರುತ್ತಾರೆ.

ಪಾಟೀ ಸವಾಲುಃ 1ನೇ ಆರೋಪಿ ಪರವಾಗಿ ವಕೀಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.